ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-04-1992.

# *ಹಾರುವಕಲೆಯ ಅನುಭವ ಮಾಡಲು ಎರಡು ವಿಷಯಗಳ ಬ್ಯಾಲೆನ್ಸ್ ಜ್ಞಾನಯುಕ್ತ ಭಾವನೆ ಹಾಗೂ ಸ್ನೇಹಯುಕ್ತ ಯೋಗ.*

(उड़ती कला का अनुभव करने के लिए दो बातों को बैलेन्स - ज्ञानयुक्त भावना और स्नेह युक्त योग)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ತನ್ನ ಜ್ಞಾನಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ತನ್ನ ಸ್ನೇಹಿ, ಭಾವನಾಮೂರ್ತಿ ಅತ್ಮರನ್ನು ಮತ್ತು ಜ್ಞಾನಸ್ವರೂಪ ಯೋಗಿ ಅತ್ಮರನ್ನು ನೋಡುತ್ತಿದ್ದಾರೆ. ಎರಡೂ ಪ್ರಕಾರದ ಆತ್ಮರು ತಂದೆಗೆ ಪ್ರಿಯರಾಗಿದ್ದಾರೆ ಹಾಗೂ ಎರಡೂ ಪ್ರಕಾರದವರು ತಂದೆಯೊಂದಿಗೆ ತಮ್ಮ-ತಮ್ಮ ಯಥಾಸ್ನೇಹ ಹಾಗೂ ಭಾವನೆಯ ಪ್ರಮಾಣ ಪ್ರತ್ಯಕ್ಷಫಲವಾಗಿ ಆಸ್ತಿಗೆ ಅಧಿಕಾರಿಗಳಾಗಿದ್ದಾರೆ. ಜ್ಞಾನಸ್ವರೂಪ ಯೋಗಿಆತ್ಮರು ತಮ್ಮ ಶಕ್ತಿಯ ಪ್ರಮಾಣ ತಂದೆಯ ಸಮೀಪ-ಸಮಾನ ಸರ್ವಶಕ್ತಿಗಳ ಅನುಭೂತಿಯ ಆಸ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದಾರೆ. ಇಬ್ಬರೂ ಪ್ರಾಪ್ತಿ ಸ್ವರೂಪರಾಗಿದ್ದಾರೆ ಆದರೆ ಇಬ್ಬರ ಪ್ರಾಪ್ತಿಯಲ್ಲಿ ಅಂತರವಿದೆ. ಸ್ನೇಹ ಮತ್ತು ಭಾವನಾಮೂರ್ತಿ ಮಕ್ಕಳು ಸದಾ ಭಾವನೆಯ ಕಾರಣ ಸ್ಮೃತಿಯಲ್ಲಿರುತ್ತಾರೆ. ತಂದೆಯೊಂದಿಗೆ ಪ್ರೀತಿಯ ಅನುಭವ ಮಾಡುತ್ತಾರೆ. ಭಾವನೆಯ ಫಲಸ್ವರೂಪದಲ್ಲಿ ಶಕ್ತಿಯ ಅನುಭವವನ್ನೂ ಮಾಡುತ್ತಾರೆ ಆದರೆ ಸದಾ ಮತ್ತು ಸರ್ವಶಕ್ತಿಗಳ ಅನುಭವ ಮಾಡುವುದಿಲ್ಲ. ಜ್ಞಾನಸ್ವರೂಪ ಯೋಗಿ ಆತ್ಮರು ಸದಾ ಸರ್ವಶಕ್ತಿಗಳ ಅನುಭೂತಿಯ ಮೂಲಕ ಸಹಜ ವಿಜಯಿಗಳಾಗುವ ವಿಶೇಷ ಅನುಭವ ಮಾಡುತ್ತಾರೆ. ಸಮಾನತೆಯ ಅನುಭವ ಮಾಡುತ್ತಾರೆ. ಹೀಗೆ ಎರಡೂ ಪ್ರಕಾರದ ಮಕ್ಕಳು ವೃದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ. ಸದಾ ಅಚಲ ಮತ್ತು ಸ್ಥಿರವಾದ ಸ್ಥಿತಿಯ ಅನುಭವವನ್ನೂ ಯೋಗೀಆತ್ಮರೇ ಮಾಡುತ್ತಾರೆ. ಸ್ನೇಹಿ ಹಾಗೂ ಭಾವನಾಸ್ವರೂಪ ಅತ್ಮರು ಭಾವನೆಯಿಂದ, ಸ್ನೇಹದಿಂದ

ಮುಂದುವರೆಯುತ್ತಿದ್ದಾರೆ ಆದರೆ ಸದಾ ವಿಜಯಿಗಳಲ್ಲ. ಸ್ನೇಹಿ ಆತ್ಮರ ಮನಸ್ಸಿನಲ್ಲಿ, ಮುಖದಲ್ಲಿ ಸದಾ ಬಾಬಾ, ಬಾಬಾ ಎಂಬುದೇ ಇರುತ್ತದೆ. ಈ ಕಾರಣದಿಂದ ಸಮಯ-ಪ್ರತಿಸಮಯ ಸಹಯೋಗವು ಪ್ರಾಪ್ತಿಯಾಗುತ್ತಾ ಇರುತ್ತದೆ. ಸಮಯ ಪ್ರಮಾಣ ತಂದೆಯ ಮುಖಾಂತರ ಭಾವನೆಯ ಫಲವು ಅವಶ್ಯವಾಗಿ ಪ್ರಾಪ್ತಿಯಾಗುತ್ತದೆ ಆದರೆ ಸಮಾನರಾಗುವುದರಲ್ಲಿ ಜ್ಞಾನ-ಯೋಗಿ ಆತ್ಮರು ಸಮೀಪವಿದ್ದಾರೆ ಆದ್ದರಿಂದ ಭಾವನೆ ಮತ್ತು ಜ್ಞಾನಸ್ವರೂಪರಾಗುವ ಲಕ್ಷ್ಯವನ್ನಿಟ್ಟುಕೊಳ್ಳಿ. ಎಷ್ಟು ಭಾವನೆಯೋ ಅಷ್ಟೇ ಜ್ಞಾನಸ್ವರೂಪರೂ ಆಗಿರಿ. ಕೇವಲ ಭಾವನೆ ಅಥವಾ ಕೇವಲ ಜ್ಞಾನವಷ್ಟೇ ಇದ್ದರೆ ಇದೂ ಸಂಪೂರ್ಣತೆಯಲ್ಲ. ಜ್ಞಾನಯುಕ್ತ ಭಾವನೆ, ಸ್ನೇಹಸಂಪನ್ನ ಯೋಗಿಆತ್ಮ ಇವೆರಡರ ಬ್ಯಾಲೆನ್ಸ್ ಸಹಜ ಹಾರುವಕಲೆಯ ಅನುಭವ ಮಾಡಿಸುತ್ತದೆ. ತಂದೆಯ ಸಮಾನ ಅರ್ಥಾತ್ ಎರಡರ ಸಮಾನತೆ.

ವರ್ತಮಾನ ಸಮಯದಲ್ಲಿ ಭಾವನಾಸ್ವರೂಪ ಆತ್ಮರು ಸೇವೆಯಲ್ಲಿ ಹೆಚ್ಚಿಗೆ ಬರುತ್ತಾರೆ. ಈ ಆತ್ಮರೂ ಸಹ ಸ್ಥಾಪನಾ ಕಾರ್ಯದಲ್ಲಿರಬಹುದು, ಆದಿಸನಾತನ ದೇವಿ-ದೇವತಾ ಧರ್ಮದ ಸ್ಥಾಪನೆಯಲ್ಲಿರಬಹುದು ಅಥವಾ ರಾಜ್ಯಸ್ಥಾಪನೆಯಲ್ಲಿ ಎರಡರಲ್ಲಿಯೂ ಅವಶ್ಯಕವಾಗಿದ್ದಾರೆ ಆದರೆ ಈಗ ಸಮಯಪ್ರಮಾಣ ಜ್ಞಾನಿ, ಯೋಗಿ ಆತ್ಮರ ಅವಶ್ಯಕತೆ ಇನ್ನೂ ಹೆಚ್ಚಿನದಾಗಿದೆ ಏಕೆಂದರೆ ಮುಂದಿನ ಸಮಯದಲ್ಲಿ ವೈರಾಗ್ಯವೃತ್ತಿಯ ವಾಯುಮಂಡಲದ ಕಾರಣ ಭಾವನಾಸ್ವರೂಪರು ಇನ್ನೂ ಸಹಜವಾಗಿ ಬಂದೇ ಬರುವರು ಆದ್ದರಿಂದ ಸೇವೆಯ ಲಕ್ಷ್ಯದಲ್ಲಿ ಜ್ಞಾನಿ. ಯೋಗಿ ಆತ್ಮರ ಕಡೆ ಹೆಚ್ಚಿನ ಗಮನವಹಿಸಬೇಕು ಏಕೆಂದರೆ ಇಂತಹ ಆತ್ಮರ ವೃದ್ಧಿಯ ಅವಶ್ಯಕತೆಯಿದೆ. ತಿಳಿಯಿತೆ! ಸಂಖ್ಯೆಯಂತೂ ಬಹಳಷ್ಟು ಹೆಚ್ಚಾಗುತ್ತಿದೆ ಎಂದು ತಿಳಿಯಬೇಡಿ ಆದರೆ ಇಂತಹ ತಂದೆಯ ಸಮಾನ ಸರ್ವಶಕ್ತಿಗಳ ಅನುಭೂತಿ ಮಾಡುವಂತಹ ಆತ್ಮರನ್ನು ತಯಾರು ಮಾಡಿರಿ. ರಾಜಧಾನಿಯ ವೃದ್ಧಿಯಂತೂ ಚೆನ್ನಾಗಿ ಆಗುತ್ತಿದೆ ಆದರೆ ವಿಶ್ವಪರಿವರ್ತನೆಯಲ್ಲಿ ಎರಡೂ ಸ್ವರೂಪಗಳ ಸಮತೋಲನೆಯುಳ್ಳ ಆತ್ಮರು ನಿಮಿತ್ತರಾಗುವರು ಏಕೆಂದರೆ ವಿಶ್ವಪರಿವರ್ತನೆಗಾಗಿ ಬಹಳ ಸೂಕ್ಷ್ಮ ಶಕ್ತಿಶಾಲಿ ಸ್ಥಿತಿಯುಳ್ಳ ಆತ್ಮರು ಬೇಕು. ಅವರು ತಮ್ಮ ವೃತ್ತಿಯ ಮೂಲಕ, ಶ್ರೇಷ್ಠ ಸಂಕಲ್ಪದ ಮೂಲಕ ಅನೇಕ ಆತ್ಮರನ್ನು ಪರಿವರ್ತನೆ ಮಾಡುವಂತಿರಬೇಕು. ಸ್ವಯಂ ಸ್ನೇಹಿ ಹಾಗೂ ಭಾವನೆಯುಳ್ಳ ಆತ್ಮರು ಸ್ವಯಂನಲ್ಲಿ ಬಹಳ ಚೆನ್ನಾಗಿ ನಡೆಯುತ್ತಾರೆ ಆದರೆ ಆ ಸ್ನೇಹ ಹಾಗೂ ಭಾವನೆಯು ವಿಶ್ವದ ಪ್ರತಿ ಇರುವುದಿಲ್ಲ. ಸ್ವಯಂನಪ್ರತಿ ಹಾಗೂ ಕೆಲವರು ಸಮೀಪ ಆತ್ಮರಪ್ರತಿ ಮಾತ್ರವೇ ಇರುತ್ತದೆ. ಬೇಹದ್ದಿನ ಸೇವೆ ಹಾಗೂ ವಿಶ್ವದಪ್ರತಿ ಸೇವೆಯನ್ನು ಬ್ಯಾಲೆನ್ಸ್ ಇರುವ ಆತ್ಮರೇ ಮಾಡಬಲ್ಲರು. ಬೇಹದ್ದಿನ ಸೇವೆಯು ತನ್ನ ಶಕ್ತಿಶಾಲಿ ಮನಸಾಶಕ್ತಿಯ ಮೂಲಕ, ಶುಭಭಾವನೆ ಮತ್ತು ಶುಭಕಾಮನೆಯ ಮೂಲಕ ಆಗುತ್ತದೆ. ಕೇವಲ ಸ್ವಯಂನಪ್ರತಿ ಭಾವುಕರಲ್ಲ ಆದರೆ ಅನ್ಯರನ್ನೂ ಸಹ ಶುಭಭಾವನೆ ಮತ್ತು ಶುಭಕಾಮನೆಯ ಮೂಲಕ ಪರಿವರ್ತಿಸಬಲ್ಲಿರಿ ಆದ್ದರಿಂದ ಇಂತಹ ಭಾವನೆ ಮತ್ತು ಜ್ಞಾನ, ಸ್ನೇಹ ಮತ್ತು ಯೋಗಶಕ್ತಿಯಿರಲಿ. ಇಂತಹ ಆತ್ಮರಾಗಿದ್ದೀರೋ ಅಥವಾ ಕೇವಲ ಸ್ನೇಹೀ ಬಾವುಕ ಅಷ್ಟನ್ನು ನೋಡಿ ಖುಷಿಪಡುತ್ತಿದ್ದೀರೋ? ಕಲ್ಯಾಣಕಾರಿಗಳಾಗಿದ್ದೀರಾ ಅಥವಾ ಬೇಹದ್ದಿನ ವಿಶ್ವಕಲ್ಯಾಣಕಾರಿಗಳಾಗಿದ್ದೀರಾ- ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಫಲಿತಾಂಶವೇನಿದೆ? ತಂದೆಗಂತೂ ಎರಡೂ ಪ್ರಕಾರದವರೂ ಪ್ರಿಯರಾಗಿದ್ದಾರೆ. ಎರಡು ಪ್ರಕಾರದ ಅತ್ಮರನ್ನು ನೋಡಿ ಬಾಪ್‌ದಾದಾ ಖುಷಿಪಡುತ್ತಾರೆ. ಏನೇ ಇರಲಿ ಸ್ನೇಹಿ ಅತ್ಮರಾಗಿ ತಂದೆಯನ್ನು ತಮ್ಮವರನ್ನಾಗಿ ಮಾಡಿಕೊಂಡರಲ್ಲವೆ! ತಂದೆಯನ್ನು ಗುರುತಿಸಿ ತಂದೆಯ ಆಸ್ತಿಗೆ ಅಧಿಕಾರಿಗಳಾದರು. ಕೋಟಿಯಲ್ಲಿ ಕೆಲವರ ಸಾಲಿನಲ್ಲಿ ಬಂದುಬಿಟ್ಟರು. ತಮ್ಮ ಆಶ್ರಯಸ್ಥಾನವನ್ನು ತಲುಪಿದರು. ತನು-ಮನದ ಅಲೆದಾಟದಿಂದ ಮುಕ್ತರಾದರು ಆದ್ದರಿಂದ ಖುಷಿಯಾಗುತ್ತದೆಯಲ್ಲವೆ ಮಕ್ಕಳು ಖುಷಿ, ತಂದೆಯೂ ಖುಷಿಯಾಗಿದ್ದಾರೆ. ಖುಷಿಯ ಅದೃಷ್ಟವಂತರಾಗಿಬಿಟ್ಟಿದ್ದೀರಲ್ಲವೆ ಪ್ರಪಂಚದ ಲೆಕ್ಕದಿಂದ ಡೈರೆಕ್ಟ್ ತಂದೆಯ ಮಕ್ಕಳಾಗುವವರು ನೋಡಲು ಎಷ್ಟು ಸಾಧಾರಣ ಅತ್ಮರಾಗಿದ್ದೀರಿ. ವಿಶ್ವಶಿಕ್ಷಕನ ವಿದ್ಯಾರ್ಥಿಗಳು ನೋಡಿ ಎಷ್ಟು ಅದ್ಭುತವಾಗಿದ್ದೀರಿ! ಓದಿಸುವವರು ಸರ್ವಶ್ರೇಷ್ಠ ಮತ್ತು ಓದುವವರು ಎಷ್ಟು ಸಾಧಾರಣ. ಆದರೆ ಸಾಧಾರಣರೇ ಸಾಧಾರಣ ಸ್ವರೂಪದಲ್ಲಿ ಬರುವ ತಂದೆಯನ್ನು ಗುರುತಿಸುತ್ತೀರಿ. ಬಾಪ್‌ದಾದಾರವರೂ ಸಹ ವಿ.ಐ.ಪಿ ಆಗಿ ಬರುವುದಿಲ್ಲ, ಸಾಧಾರಣ ರೂಪದಲ್ಲಿ ಬರುತ್ತಾರೆ. ಯಾವುದೇ ಪ್ರಧಾನಮಂತ್ರಿ ಅಥವಾ ಯಾವುದೇ ರಾಜನ ತನುವಿನಲ್ಲಿ ಬರುವುದಿಲ್ಲ ಆದ್ದರಿಂದ ಗುರುತಿಸುವಂತಹ ಸಾಧಾರಣರೇ ಭಾಗ್ಯವನ್ನು

ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಅದೃಷ್ಟವಂತರಾಗಿದ್ದೀರಲ್ಲವೆ. ಎಷ್ಟೊಂದು ಭಾಗ್ಯವು ಪ್ರಾಪ್ತಿಯಾಗಿದೆ. ಪದಮಾಪದವೆಂದು ಹೇಳಿದರೂ ಕಡಿಮೆಯೇ. ಇಂದೂ ಸಹ ನೋಡಿ ಸಂಖ್ಯೆಯು ಬಹಳಷ್ಟಿದೆಯಲ್ಲವೆ! ಇಷ್ಟು ದೊಡ್ಡ ಹಾಲ್ ಏತಕ್ಕಾಗಿ? ಎಂದು ಮೊದಲು ಯೋಚಿಸುತ್ತಿದ್ದೀರಿ ಆದರೆ ಈಗ ಏನು ಅನಿಸುತ್ತದೆ? ಇದಕ್ಕಿಂತಲೂ ದೊಡ್ಡಹಾಲ್ ಆಗಬೇಕು ಎಂದು. ಬ್ರಾಹ್ಮಣರಿಗೆ ಇದು ವರದಾನವಾಗಿದೆ. ಎಷ್ಟು ದೊಡ್ಡದಾಗಿ ಕಟ್ಟಿಸುತ್ತಾ ಹೋಗುತ್ತೀರೋ ಅದೂ ಸಹ ಚಿಕ್ಕದಾಗುತ್ತಾ ಹೋಗುತ್ತದೆ. ಈಗ ಬಂದಿರುವವರೆಲ್ಲರಿಗೂ ಶುಭಾಷಯಗಳನ್ನು ನೀಡುತ್ತೇವೆ. ಕೇವಲ ಬಾವುಕರಾಗಬೇಡಿ, ಜ್ಞಾನಿಗಳಾಗಿ, ಪ್ರಕೃತಿಯ ಜ್ಞಾನಿಗಳೂ ಆಗಿರಿ, ಜ್ಞಾನವು ಕೇವಲ ಅತ್ಮದ್ದಲ್ಲ. ಅತ್ಮ, ಪರಮಾತ್ಮ ಮತ್ತು ಪ್ರಕೃತಿ. ಅದರಲ್ಲಿ ಡ್ರಾಮಾವು ಬಂದುಬಿಡುತ್ತದೆ. ಮೂರರ ಜ್ಞಾನವಿರಬೇಕು. ಎಲ್ಲಿಗೆ ಹೋಗುತ್ತಿದ್ದೇವೆ ಮತ್ತು ತಮಗಾಗಿ ಯಾವ ಗಮನವಿರಬೇಕು. ಹೀಗೆ ಒಂದುವೇಳೆ ಪ್ರಕೃತಿಯ ಜ್ಞಾನವಿಲ್ಲದಿದ್ದರೂ ಸಹ ಅವರು ಜ್ಞಾನಪೂರ್ಣರಲ್ಲ, ಸ್ಥಾನ, ವ್ಯಕ್ತಿ, ಸ್ಥಿತಿ- ಈ ಮೂರರ ಜ್ಞಾನವನ್ನಿಟ್ಟುಕೊಳ್ಳಿ. ಕೇವಲ ಬಾವುಕರಾಗಬೇಡಿ. ಹೋಗಲೇಬೇಕು ಕರೆತರಲೇಬೇಕು.... ಎಂದು. ಜ್ಞಾನಸ್ವರೂಪರೆಂದರೆ ದೂರಾಂದೇಶಿ, ತ್ರಿಕಾಲದರ್ಶಿಗಳು. ಮೂರರ ಜ್ಞಾನವು ಒಂದುವೇಳೆ ಸ್ಪಷ್ಟವಾಗಿದ್ದರೆ ಸಫಲತೆ ಸಿಗುತ್ತದೆ. ಒಂದುವೇಳೆ ಯಾರಾದರೂ ತಮ್ಮ ಅಜಾಗರೂಕತೆಯಿಂದ ಮತ್ತೆ ಮತ್ತೆ ರೋಗಿಯಾಗುತ್ತಾರೆಂದರೆ ಅಂತಹವರಿಗೆ ಬಾಪ್‌ದಾದಾ ಜ್ಞಾನಿ, ಯೋಗಿಗಳೆಂದು ಹೇಳುವುದಿಲ್ಲ. ಜ್ಞಾನದ ಅರ್ಥವಾಗಿದೆ- ತಿಳುವಳಿಕೆ. ತಮ್ಮ ಸ್ಥಿತಿಯನ್ನು ಅರಿತುಕೊಳ್ಳಿ. ತಮ್ಮ ಶರೀರವನ್ನೂ ಅರಿತುಕೊಳ್ಳಿ. ಆತ್ಮನ ಸ್ಥಿತಿ. ಶರೀರದ ಸ್ಥಿತಿ. ವಾಯುಮಂಡಲ ಇದೆಲ್ಲದರ ಜ್ಞಾನವು ಬುದ್ಧಿಯಲ್ಲಿ ಇದ್ದಾಗಲೇ ಜ್ಞಾನಪೂರ್ಣರು ಆದ್ದರಿಂದ ಕೇವಲ ಭಾವನೆಯಿಂದ ರಾಜಿಯಾಗಿಬಿಡಬೇಡಿ, ಬರುವವರು ಮತ್ತು ಕರೆತರುವವರು ಇಬ್ಬರೂ ಜ್ಞಾನಪೂರ್ಣರಾಗಬೇಕು. ಏನಾಗುವುದೋ ಅದಕ್ಕೆ ಮಧುರ ಡ್ರಾಮಾ ಎಂದೇ ಹೇಳಬಹುದು. ಏರುಪೇರಿನಲ್ಲಂತೂ ಬರುವುದಿಲ್ಲ ತಾನೆ. ಅಚಲವಾಗಿರಿ ಆದರೆ ಮುಂದಿನದಕ್ಕಾಗಿ ಗಮನವಹಿಸಿ. ಬಾಪ್‌ದಾದಾರವರಿಗೂ ಗೊತ್ತಿದೆ- ಮಕ್ಕಳು ಎಷ್ಟು ಪರಿಶ್ರಮ ಹಾಗೂ ಸಹನೆ ಮಾಡಿಕೊಂಡು ಬರುತ್ತೀರಿ. ಇದಕ್ಕಾಗಿ ಶುಭಾಷಯಗಳನ್ನಂತೂ ನೀಡಿದೆವು. ಯಾವ ಆತ್ಮನದು ಯಾವ ಆಸ್ತಿಯಿದೆಯೋ ಅದು ಅವರಿಗೆ ಪ್ರಾಪ್ತಿಯಾಗಲೇಬೇಕಾಗಿದೆ. ಯಾರೂ ಆಸ್ತಿಯಿಂದ ವಂಚಿತರಾಗಲು ಸಾಧ್ಯವಿಲ್ಲ. ಸಾಕಾರದಲ್ಲಿ ಸನ್ಮುಖದಲ್ಲಿರಬಹುದು. ತಮ್ಮ ಸ್ಥಾನದಲ್ಲಿದ್ದು ಮನ್ಮನಾಭವ ಆಗಿರಬಹುದು. ಆಸ್ತಿಯಂತೂ ಅವಶ್ಯವಾಗಿ ಪ್ರಾಪ್ತಿಯಾಗಿಯೇ ಆಗುತ್ತದೆ ಆದ್ದರಿಂದ ಈಗ ಡಬಲ್ ಜ್ಞಾನಪೂರ್ಣರಾಗಬೇಕು. ಕೇವಲ ಅರ್ಧಜ್ಞಾನಿಗಳಲ್ಲ. ಒಳ್ಳೆಯದು-

**ನಾಲ್ಕಾರು ಕಡೆಯ ಸರ್ವ ಅದೃಷ್ಟವಂತ ಆತ್ಮರು, ಸರ್ವ ಸ್ನೇಹ ಮತ್ತು ಯೋಗಶಕ್ತಿಯ ಸಮಾನತೆಯ ಅನುಭವೀ ಆತ್ಮರು ಭಾವನೆ ಮತ್ತು ಜ್ಞಾನಸ್ವರೂಪ ಆತ್ಮರು ಸದಾ ತಂದೆಯ ಸಮಾನರಾಗುವ ಲಕ್ಷ್ಯವನ್ನು ಪೂರ್ಣ ಮಾಡುವಂತಹ ಆತ್ಮರು ಸದಾ ಸಮೀಪ ಅನುಭವ ಮಾಡುವಂತಹ ಅತ್ಮರು, ಇಂತಹ ಅಚಲ-ಸ್ಥಿರವಾಗಿರುವ ಆತ್ಮರು, ವಿಶೇಷ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ಅವ್ಯಕ್ತ ಬಾಪ್-ದಾದಾರವರ ಮಿಲನ:-**

ಸಂಘಟನೆಯ ಶಕ್ತಿಯನ್ನು ಮುಂದುವರೆಸುತ್ತಿದ್ದೀರಿ. ಒಳ್ಳೆಯ ಸಾಹಸದಿಂದ ಒಬ್ಬರು ಮತ್ತೊಬ್ಬರಿಗೆ ಸಹಯೋಗವನ್ನು ನೀಡಿ ವೃದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ. ತಾವು ನಿಮಿತ್ತರಾಗಿರುವ ಆತ್ಮರ ಸಾಹಸ ಅನೇಕ ಆತ್ಮರ ಸಾಹಸವನ್ನು ಮುಂದುವರೆಸುತ್ತದೆ. ಪ್ರತಿ ಪರಿಸ್ಥಿತಿಯ ಅನುಭವಿಯಾಗಿದ್ದೀರಿ. ಹೊಸತೇನಲ್ಲ ಅನಿಸುತ್ತದೆಯೇ? ಬಾಪ್ ದಾದಾರವರು ಪರದೆಯ ಒಳಗೆ ಸಕಾಶವನ್ನು ನೀಡುತ್ತಿದ್ದಾರೆ. ಆದರೆ ಸ್ಟೇಜ್‌ನ ಮೇಲೆ ಪಾತ್ರ ಮಾಡುವಂತಹವರು ತಾವಾತ್ಮರಾಗಿದ್ದೀರಿ. ಒಳ್ಳೆಯ ಪಾತ್ರವನ್ನು ಅಭಿನಯಿಸುತ್ತಿದ್ದೀರಿ. ಬಾಪ್ ದಾದಾರವರು ಸದಾ ನಿಮಿತ್ತ ಮಹಾವೀರರ ಸಂಘಟನೆಗೆ ವಿಶೇಷವಾಗಿ ಅಮೃತವೇಳೆ ನಂಬರ್ ವನ್

ಅದೇ ಅತ್ಮರಿಗೆ ನೆನಪು ಪ್ರೀತಿ ಗುಡ್ ಮಾರ್ನಿಂಗ್ ಮಾಡುತ್ತಿದ್ದಾರೆ ಮತ್ತು ಅದನ್ನೇ ಸಕಾಶವಂತಾದರೂ ಹೇಳಿ, ಪ್ರೀತಿ ಎಂದಾದರೂ ಹೇಗೆ, ಇಡೀ ದಿನಕ್ಕೆ ಔಷಧಿಯಾಗಿ ಬಿಡುತ್ತದೆ. ಈ ರೀತಿ ಅನಿಸುತ್ತದೆಯಲ್ಲವೇ? ಎಲ್ಲವೂ ಒಳ್ಳೆಯದು. ಸಾಹಸದಿಂದ ಸಫಲತೆಯಾಗುತ್ತದೆ.

**ಅವ್ಯಕ್ತ ಬಾಪ್‌ದಾದಾರವರ ಜೊತೆ ಡಬಲ್ ವಿದೇಶಿ ಸಹೋದರ-ಸಹೋದರಿಯರ ಭೇಟಿ:-**

ಆಸ್ಟ್ರೇಲಿಯಾ ಪಾರ್ಟಿಯವರ ಜೊತೆ ಆಸ್ಟ್ರೇಲಿಯಾ ನಿವಾಸಿಯವರ ವಿಶೇಷತೆಗಳನ್ನು ಬಾಪ್- ದಾದಾರವರು ನೋಡುತ್ತಿದ್ದರು. ಆಸ್ಟ್ರೇಲಿಯಾ ನಿವಾಸಿಯರ ವಿಶೇಷತೆ ಏನಾಗಿದೆ? ತಿಳಿದುಕೊಂಡಿದ್ದೀರಾ(ಮೊದಲ ಬಾರಿ ಬಂದಿದ್ದೇವೆ ಆದ್ದರಿಂದ ತಿಳಿದುಕೊಂಡಿಲ್ಲ) ಹೊಸ ಸ್ಥಾನಕ್ಕೆ ಬಂದಿದ್ದೀರಾ ಅಥವಾ ನಿಮ್ಮ ಪರಿಚಯ ಇರುವ ಸ್ಥಾನಕ್ಕೆ ಬಂದಿದ್ದೀರಾ ಇಲ್ಲಿ ತಲುಪುವುದರಿಂದ ಕಲ್ಪದ ಮೊದಲಿನ ಸ್ಮೃತಿ ಇಷ್ಟು ಸ್ಪಷ್ಟವಾಗಿ ಬಂದು ಬಿಡುತ್ತದೆ. ಹೇಗೆ ಈ ಜನ್ಮದಲ್ಲಿ ಈಗೀಗ ನೋಡಿದ್ದೇವೆ ಇದೇ ಚಿಹ್ನೆಯಾಗಿದೆ ಸಮೀಪ ಆತ್ಮರದ್ದು. ಇದೇ ಅನುಭವದ ಮೂಲಕವೇ ತಮ್ಮನ್ನು ತಾವು ತಿಳಿದುಕೊಳ್ಳಬಹುದು ನಾವು ಬ್ರಾಹ್ಮಣ ಆತ್ಮರಲ್ಲೂ ಸಹ ಸಮೀಪ ಆತ್ಮರಾಗಿದ್ದೇವೆಯೊ ಅಥವಾ ದೂರದ ಆತ್ಮರಾಗಿದ್ದೇವೆಯೇ ಎಂದು. ಫರ್ಸ್ಟ್ ನಂಬರ್‌ನವರಾ ಅಥವಾ ಸೆಕೆಂಡ್ ನಂಬರ್‌ನವರಾ? ಇದೇ ಈ ಅಲೌಕಿಕ ಸಂಬಂಧದಲ್ಲಿ ವಿಶೇಷತೆ ಆಗಿದೆ. ಪ್ರತಿಯೊಬ್ಬರು ತಿಳಿದುಕೊಳ್ಳುತ್ತಾರೆ - ನಾನು ಫರ್ಸ್ಟ್ ಹೋಗುತ್ತೇನೆಂದು ಲೌಕಿಕದಲ್ಲಂತು ನಂಬರ್ ವಾರ್ ತಿಳಿದುಕೊಳ್ಳುತ್ತಾರೆ ಇವರು ದೊಡ್ಡವರು. ಇವರು ಸೆಕೆಂಡ್ ನಂಬರಿನವರು, ಇವರು ಮೂರನೆಯ ನಂಬರಿನವರು. ಆದರೆ ಇಲ್ಲಿ ಲಾಸ್ಟ್‌ನವರೂ ಸಹ ತಿಳಿದುಕೊಳ್ಳುತ್ತಾರೆ ನಾನು ಲಾಸ್ಟ್ ಸೋ ಫರ್ಸ್ಟ್ ಆಗಿದ್ದೇನೆ ಎಂದು ಈ ಲಕ್ಷ್ಯ ಒಳ್ಳೆಯದಾಗಿದೆ. ಫರ್ಸ್ಟ್ ಬರಲೇಬೇಕು ಹಾಗಾದರೆ ಫರ್ಸ್ಟ್ ನ ಚಿಹ್ನೆ ಏನಾಗಿದೆ ಸದಾ ತಂದೆಯ ಜೊತೆ ಇರುವುದು. ಪ್ರಯತ್ನ ಮಾಡಬಾರದು ಆದರೆ ಸದಾ ಜೊತೆತನದ ಅನುಭವ ಇರಲಿ. ಯಾವಾಗ ಈ ಅನುಭವವಾಗಿ ಬಿಡುತ್ತದೆ ನನ್ನ ಬಾಬಾ ಎಂದು, ಯಾವುದು ನನ್ನದಾಗಿರುತ್ತದೆ ಅದು ಸ್ವತಃವಾಗಿಯೇ ನೆನಪಿರುತ್ತದೆ. ನೆನಪು ಮಾಡಬೇಕಾಗಿರುವುದಿಲ್ಲ. ನನ್ನದು ಅರ್ಥಾತ್ ಅಧಿಕಾರ ಪ್ರಾಪ್ತಿಯಾಗಿ ಬಿಡುವುದು. "ಬಾಬಾ ನನ್ನವರು ನಾನು ಬಾಬಾರವನು" ಎಷ್ಟು ಕಡಿಮೆ ಶಬ್ದವಾಗಿದೆ ಹಾಗೂ ಸೆಕೆಂಡ್ ಮಾತಾಗಿದೆ ಇದಕ್ಕೆ ಹೇಳಲಾಗುತ್ತದೆ ಸಹಯೋಗಿ. ನಿಮ್ಮ ಬೋರ್ಡ್ ನಲ್ಲೂ ಸಹ ಸಹಜ ರಾಜಯೋಗ ಕೇಂದ್ರ ಎಂದು ಬರೆದಿದ್ದಾರೆ ಅಲ್ಲವೇ. ಹಾಗಾದರೆ ಹೀಗೆ ತಿಳಿದು ಸಹಜಯೋಗ ಕಲಿತಿದ್ದೀರಾ.. ಮಾಯೆ ಬರುತ್ತದೆಯೇ ತಂದೆಯ ಜೊತೆ ಇರುವವರ ಮುಂದೆ ಮಾಯೆ ಬರಲು ಸಾಧ್ಯವಿಲ್ಲ. ಹೇಗೆ ತಮ್ಮ ಶರೀರವಿರುವ ಸ್ಥಾನ ತಿಳಿದಿದೆ. ಆಗಿ ಹೋಗಿದೆ ಎಂದ ಮೇಲೆ ಫ್ರೀ ಇದ್ದಾಗ ತಮ್ಮ ಮನೆಯಲ್ಲಿ ಬಂದು ರೆಸ್ಟ್ ಮಾಡಿ. ಇದೇ ರೀತಿ ಈಗ ತಿಳಿದಿದೆ ನಾನು ತಂದೆಯ ಸಮೀಪವಿರಬೇಕು. ಇದೇ ಸ್ಥಾನವಾಗಿದೆ ಎಂದ ಮೇಲೆ ಕಾರ್ಯವನ್ನು ಮಾಡುತ್ತಿರಬಹುದು. ಈ ರೀತಿ ಬುದ್ಧಿಯ ಮೂಲಕ ಅನುಭವವಾಗಲಿ, ಪ್ರತಿಯೊಬ್ಬರು ತಮ್ಮ ಅದೃಷ್ಟವನ್ನು ತಯಾರು ಮಾಡಿ ಅದೃಷ್ಟ ಮಾಡುವವರ ಮುಂದೆ ಬಂದುಬಿಟ್ಟಿದ್ದೀರಿ. ಬಾಪ್‌ದಾದಾರವರು ಪ್ರತಿಯೊಬ್ಬ ಅದೃಷ್ಟದ ನಕ್ಷತ್ರ ಹೊಳೆಯುತ್ತಿರುವುದನ್ನು ನೋಡುತ್ತಿದ್ದಾರೆ. ಭಿನ್ನ ಗ್ರೂಪ್ ಆಗಿದೆ. ಮಕ್ಕಳೂ ಇದ್ದಾರೆ ವೃದ್ಧರೂ ಇದ್ದಾರೆ. ಆದರೆ ಈಗಂತೂ ಎಲ್ಲರೂ ಚಿಕ್ಕ ಮಕ್ಕಳಾಗಿ ಬಿಟ್ಟಿದ್ದಾರೆ ಈಗ ಕೆಲವರು ಹೇಳುತ್ತಾರೆ 8 ತಿಂಗಳಿನವರಾಗಿದ್ದಾರೆ ಇನ್ನು ಕೆಲವರು ಹೇಳುತ್ತಾರೆ 12 ತಿಂಗಳಿನವರು ಆಗಿದ್ದೇವೆ ಅಲೌಕಿಕ ಜನ್ಮವನ್ನೇ ವರ್ಣನೆ ಮಾಡುತ್ತಾರೆ ಒಳ್ಳೆಯದು.

ಎಲ್ಲರೂ ಕಲ್ಪದ ಮೊದಲಿನ ಅಗಲಿ ಮರಳಿ ಸಿಕ್ಕಿರುವ ಆತ್ಮಗಳಾಗಿದ್ದೀರಿ. ಸದಾ ತಂದೆಯ ಅಟೂಟ್(ಮುರಿಯಲಾಗದ) ಲಗನ್ನಿನಲ್ಲಿ ಮಗ್ನರಾಗಿದ್ದು ಮುಂದುವರೆಯುತ್ತಾ ಹೋಗಿ ಈ ಮುರಿಯಲಾಗದ ನೆನಪೇ ಸರ್ವ ಸಮಸ್ಯೆಗಳನ್ನು ಪರಿಹರಿಸಿ ಹಾರುವ ಹಕ್ಕಿಯನ್ನಾಗಿ ಮಾಡಿ ಹಾರುವ ಕಲೆಯಲ್ಲಿ ತೆಗೆದುಕೊಂಡು ಹೋಗುತ್ತದೆ. ಬಾಪ್-ದಾದಾರವರ ಹೃದಯ ಸಿಂಹಾಸನಾಧೀಶರಾದ ಮೇಲೆ ಸದಾ ಇದೇ ನಶೆಯಲ್ಲಿರಿ. ನಾವು ಕಲ್ಪ ಕಲ್ಪದ ಅಧಿಕಾರಿಯಾಗಿದ್ದೇವೆ. ಕಲ್ಪ ಕಲ್ಪ ನಮ್ಮ

ಅಧಿಕಾರವನ್ನು ತೆಗೆದುಕೊಳ್ಳುತ್ತಾ ಇರುತ್ತೇವೆ ಶುಭಾಶಯಗಳು. ಸದಾ ಶುಭಾಷಯಗಳನ್ನು ತೆಗೆದುಕೊಳ್ಳಲು ಪಾತ್ರ ಆತ್ಮಗಳಾಗಿದ್ದೀರಿ. ಒಳ್ಳೆಯದು.

ರಿವೈಸ್ ಕೋರ್ಸ್ 01-04-1992.

***ಹಾರುವ ಕಲೆಯ ಅನುಭವ ಮಾಡಲು ಎರಡು ವಿಷಯಗಳ ಬ್ಯಾಲೆನ್ಸ್ ಜ್ಞಾನಯುಕ್ತ ಭಾವನೆ ಹಾಗೂ ಸ್ನೇಹ ಯುಕ್ತ ಯೋಗ***

ಸ್ನೇಹಿ ಹಾಗೂ ಭಾವನಾ ಸ್ವರೂಪ ಆತ್ಮರು ಭಾವನೆಯಿಂದ ಸ್ನೇಹದಿಂದ ಮುಂದುವರೆಯುತ್ತಿದ್ದಾರೆ ಆದರೆ ಸದಾ ವಿಜಯಗಳಲ್ಲ. ಜ್ಞಾನಿಯೋಗಿ ಆತ್ಮರು ಸಮೀಪವಿರುತ್ತಾರೆ ಆದ್ದರಿಂದ ಭಾವನೆ ಮತ್ತು ಸ್ನೇಹಸಂಪನ್ನ ಯೋಗಿ ಆತ್ಮ ಇವೆರಡರ ಬ್ಯಾಲೆನ್ಸ್ ಸಹಜ ಹಾರುವ ಕಲೆಯ ಅನುಭವ ಮಾಡಿಸುತ್ತದೆ ಮತ್ತು ಸೂಕ್ಷ್ಮ ಶಕ್ತಿಶಾಲಿ ಸ್ಥಿತಿ ಇರುವುದರಿಂದ ಅವರ ವೃತ್ತಿಯಿಂದ ಶ್ರೇಷ್ಠ ಸಂಕಲ್ಪದಿಂದ ಅನೇಕ ಆತ್ಮರನ್ನು ಪರಿವರ್ತನೆ ಮಾಡಿ ವಿಶ್ವ ಪರಿವರ್ತನಾ ಕಾರ್ಯವನ್ನು ಮಾಡಬಲ್ಲರು. ಮನಸಾ ಶಕ್ತಿಯಿಂದಲೇ ಬೇಹದ್ ಸೇವೆಯನ್ನು ಮಾಡಬಲ್ಲರು. ಬೇಹದ್ ವಿಶ್ವಕಲ್ಯಾಣಕಾರಿ ಆಗಬಲ್ಲರು. ಎಲ್ಲಿಗಾದರೂ ಹೋಗುವಾಗ ಆ ಪ್ರಕೃತಿ(ಸ್ಥಾನ), ವ್ಯಕ್ತಿ, ಸ್ಥಿತಿ ಎಲ್ಲವುಗಳ ಜ್ಞಾನವಿರಬೇಕು. ನಮ್ಮ ಆತ್ಮನ ಸ್ಥಿತಿ, ಶರೀರದ ಸ್ಥಿತಿ, ವಾಯುಮಂಡಲದ ಜ್ಞಾನ, ಜೊತೆಗಾರರ ಬಗ್ಗೆ, ಜ್ಞಾನವಿರಬೇಕು. ಅವರನ್ನೇ ಜ್ಞಾನ ಸಾಗರರು ಎಂದು ಹೇಳುತ್ತಾರೆ. ಮಾತುಮಾತಿಗೆ ರೋಗಿಯಾದರೆ ಅವರನ್ನು ಕೂಡ ಜ್ಞಾನಿಯೋಗಿ ಎಂದು ಕರೆಯುವುದಿಲ್ಲ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಸರ್ವ ಶಕ್ತಿಗಳ ಅನುಭೂತಿಯಿಂದ ಸಹಜವಾಗಿ ವಿಜಯೀ ಆಗುವ ವಿಶೇಷ ಅನುಭವ ಮಾಡಿಕೊಂಡಿರುವ ಜ್ಞಾನ ಸ್ವರೂಪ ಯೋಗಿ ಆತ್ಮ.

2. ನಾನು ಜ್ಞಾನಯುಕ್ತ ಭಾವನೆ ಮತ್ತು ಸ್ನೇಹ ಸಂಪನ್ನ ಯೋಗಿ ಆತ್ಮ ಈ ಎರಡರ ಸಮಾನತೆಯಿಂದ ಸಹಜವಾಗಿ ಹಾರುವ ಕಲೆಯನ್ನು ಅನುಭವ ಮಾಡಿಕೊಂಡಿದ್ದೇನೆ.

3. ನಾನು ನನ್ನ ಸೂಕ್ಷ್ಮ ಶಕ್ತಿಶಾಲಿ ಸ್ಥಿತಿಯಲ್ಲಿದ್ದು ವೃತ್ತಿಯಿಂದ, ಶ್ರೇಷ್ಠ ಸಂಕಲ್ಪದಿಂದ ಅನೇಕ ಆತ್ಮರನ್ನು ಪರಿವರ್ತನೆ ಮಾಡಿದ್ದೇನೆ.

4. ನಾನು ಸ್ವಯಂನ ಶಕ್ತಿಶಾಲಿ ಮನಸಾ ಶಕ್ತಿಯಿಂದ ಶುಭ ಭಾವನೆ ಶುಭಕಾಮನೆಗಳಿಂದ ಬೇಹದ್ ಸೇವೆಯನ್ನು ಮಾಡಿದ್ದೇನೆ.

5. ನಾನು ಎಲ್ಲಿಯಾದರೂ ಹೋಗುತ್ತಿರಬೇಕಾದಾಗ ಆ ಸ್ಥಾನದ, ವ್ಯಕ್ತಿಯ, ಸ್ಥಿತಿಯ, ಜೊತೆ ಬರುವವರ ಜ್ಞಾನವನ್ನು ಇಟ್ಟಿರುವ ಜ್ಞಾನ ಸಾಗರನು.